**MVC No.769 ಮತ್ತು 770/2022**

**ದಿನಾಂಕ: 05.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ : ಎದುರುದಾರ ಪರ ಶ್ರೀ. ಎಸ್ ಟಿ ಕೆ ವಕೀಲರಿಂದ

ನನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ನಿಶಾನಿಸಬೇಕೆಂದು ಕೇಳಿಕೊಳ್ಳುತ್ತೇನೆ.

| | |
|---|---|
| ನಿ ಆರ್ 1 | ದಿನಾಂಕಃ 29.01.2022 ರಂದು ಪಿ ಎಸ್ ಐ ಹಾನಗಲ್ ರವರಿಗೆ ನೀಡಿದ ದೂರಿನ ಪ್ರತಿ |
| ನಿ ಆರ್ 2 | ದಿನಾಂಕಃ 29.01.2022 ರಂದು ಎಸ್ ಪಿ ಹಾವೇರಿ ರವರಿಗೆ ನೀಡಿದ ದೂರಿನ ಪ್ರತಿ |
| ನಿ ಆರ್ 3 ಮತ್ತು 4 | ಎರಡು ಅಂಚೆ ರಶೀದಿಗಳು |
| ನಿಆರ್ 5 ಮತ್ತು 6 | ಎರಡು ಅಂಚೆ ಸ್ವೀಕೃತಿಗಳು |

ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ. ಆರ್ ಎಸ್ ಜಿ ವಕೀಲರಿಂದಃ

ಸದರಿ ಅಪಘಾತ ಹಾನಗಲ್ ಹಾವೇರಿ ರಸ್ತೆಯ ಗಿರಿಶಿಣಕೊಪ್ಪ ಕ್ರಾಸ್ ಬಳಿ ಆಗಿರುತ್ತದೆ. ಹಾನಗಲ್ ದಿಂದ ಹಾವೇರಿಗೆ ಹೋಗುವ ರಸ್ತೆಯ ಎಡಭಾಗದ ಬಳಿ ಸದರಿ ಅಪಘಾತವಾಗಿದೆ ಎಂದರೆ ಸರಿ. ಸದರಿ ಮೋಟಾರ್ ಸೈಕಲ ಸವಾರರು ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದು ನನ್ನ ವಿರುದ್ದ ಹಾನಗಲ್ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಕ್ರೈ ನಂ. 14/2022 ಎಂದರೆ ಸರಿ. ಸದರಿ ದೂರಿನ ಆಧಾರದ ಮೇಲೆ ಪೋಲಿಸರು ತನಿಖೆ ಮಾಡಿ ನನ್ನ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿದ್ದು ಅದರನ್ವಯ ಸಿಸಿ ಪ್ರಕರಣ ನನ್ನ ವಿರುದ್ದ ಚಾಲ್ತಿಯಲ್ಲಿದೆ ಎಂದರೆ ಸರಿ. ಸದರಿ ಅಂತಿಮ ವರದಿಯನ್ನು ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ.

2. ಸದರಿ ಅಪಘಾತ ದಿಃ 27.01.2022 ರಂದು ಬೆಳಗಿನ 8.50 ರ ಸಮಯದಲ್ಲಿ ಆಗಿದೆ ಎಂದರೆ ಸರಿ. ಅದೇ ದಿನ ಬೈಕ ಸವಾರ ನನ್ನ ವಿರುದ್ದ ದೂರು ದಾಖಲಿಸಿದ್ದರು ಎಂದರೆ ಸರಿ. ನಾನು ನನ್ನ ಇಲಾಖೆಯವರ ಮಾತು ಕೇಳಿ ಪಿ ಎಸ್ ಐ ಹಾನಗಲ್ ಹಾಗೂ ಎಸ್ ಪಿ ಹಾವೇರಿ ಅವರಿಗೆ ನಿ ಆರ್ -1 ಮತ್ತು 2 ದೂರನ್ನು ಅಂಚೆ ಮುಖಾಂತರ ಸಲ್ಲಿಸಿದ್ದು ಅದರ ಮೇಲೆ ಪೋಲಿಸರು ತನಿಖೆ ಕೈಗೊಂಡಿದ್ದಾರೋ ಇಲ್ಲವೋ ನಾನು ಪರಿಶೀಲಿಸಿಲ್ಲ. ಸದರಿ ನಿ ಆರ್ -1 ಮತ್ತು 2 ಸುಳ್ಳು ಇದ್ದದ್ದರಿಂದ ಅದರ ಮೇಲೆ ಪೋಲಿಸರು ಯಾವುದೇ ತನಿಖೆ ಕೈಗೊಳ್ಳದೇ ಅದನ್ನು ವಿಲೆಗೆ

ಹಾಕಿರುತ್ತಾರೆ ಆದ್ದರಿಂದ ಆ ಬಗ್ಗೆ ದಾಖಲೆಗಳನ್ನು ತಂದು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ನನ್ನ ಬಸ್ಸನ್ನು ಗಿರಿಶಿಣಕೊಪ್ಪ ಕ್ರಾಸ್ ಕಡೆಗೆ ಬಸ್ಸನ್ನು ತಿರುಗಿಸಿಕೊಂಡಿದ್ದರಿಂದ ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದಲೇ ಆಗಿದೆ ಎಂದರೆ ಸರಿಯಲ್ಲ.

**: ಮರುವಿಚಾರಣೆ : ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**C/C 1** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್